

ರೀತಿಯಲ್ಲಿಯೇ ಬ್ರೆಜಿಲ್‌ನಲ್ಲಿ 1743ರಿಂದ ನಡೆದುಕೊಂಡು ಬಂದಿದೆ. ಕಾಲಕ್ರಮೇಣ ಈ ಆಚರಣೆ ಅಮೆರಿಕಕ್ಕೂ ಕಾಲಿಟ್ಟಿದೆ.

ಅಮೆರಿಕದ ದಕ್ಷಿಣ ಭಾಗದಲ್ಲಿ ಕಪ್ಪು ಜನರು ಹೆಚ್ಚು. ಅದಲ್ಲದೇ, ನ್ಯೂ ಒರ್ಲಿಯಾನ್ಸ್ ಪ್ರಾಂತ್ಯವು ಫ್ರೆಂಚರ ಹಿಡಿತದಲ್ಲಿ ಇದ್ದುದರಿಂದ ಈ ಆಚರಣೆ ಇಲ್ಲಿಗೆ ಹರಿದುಬಂತು ಎನ್ನುತ್ತಾರೆ ಇತಿಹಾಸ ಬಲ್ಲವರು. ಈ ಹಬ್ಬದ ಆಚರಣೆಯಲ್ಲಿ ಶ್ರೀಮಂತ, ಬಡವ ಎಂಬ ಬೇಧಭಾವ ಇರುವುದಿಲ್ಲ. ಕಪ್ಪು–ಬಿಳಿ ಎಂಬ ಮನಸ್ಸಿನ ಅಂತರ ಇರುವುದಿಲ್ಲ. ದೇವರ ಮುಂದೆ ಎಲ್ಲರೂ ಸಮಾನರು ಎಂಬುದನ್ನು ಈ ಹಬ್ಬದ ಮೂಲಕ ತೋರಿಸಿಕೊಡಬೇಕು ಎನ್ನುವುದು ಅವರ ಉದ್ದೇಶವಂತೆ.

ಹಾಗೆಂದೇ ಒರ್ಲಿಯಾನ್ಸ್‌ನಲ್ಲಿ ಹಬ್ಬದ ವೇಳೆ ಶ್ರೀಮಂತರು ಬಡವರ ರೀತಿ ವೇಷ ಧರಿಸಿದರೆ, ಬಡವರು ಶ್ರೀಮಂತರ ಧಿರಿಸಿನಲ್ಲಿ ಭಾಗವಹಿಸುತ್ತಾರೆ. ಬಿಳಿಯರು ಕಪ್ಪಗಿನ ವೇಷ ಧರಿಸಿದರೆ, ಕಪ್ಪಗಿನ ಮನುಷ್ಯರು ಇಲ್ಲಿ ಬಿಳಿಯರಂತೆ ವೇಷ ಧರಿಸಿ ಮಿಂಚುತ್ತಿದ್ದರು. ಒಟ್ಟಾರೆ ಎಲ್ಲರೂ ಬೆರೆತು ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ. ಮೆರವಣಿಗೆಯಲ್ಲಿ ಅಮೆರಿಕದ ವಿವಿಧ ರಾಜ್ಯಗಳಿಂದ ಬಂದ ಜನರು ಭಾಗವಹಿಸಿದರೂ, ಆಯಾಯ ರಾಜ್ಯದ ಕಲೆ, ಸಂಸ್ಕೃತಿಯನ್ನು ಬಿಂಬಿಸುವ ರೀತಿಯ ವೇಷಭೂಷಣಗಳನ್ನು ಧರಿಸಿ ಗಮನ ಸೆಳೆಯುವುದು ಎದ್ದು ಕಾಣುತ್ತದೆ.

ಈ ಆಚರಣೆ ನ್ಯೂ ಒರ್ಲಿಯಾನ್ಸ್ ರಾಜ್ಯಕ್ಕಷ್ಟೇ ಸೀಮಿತವಾಗದೆ, ಇತರ ರಾಜ್ಯಗಳಲ್ಲೂ ನಡೆಯುತ್ತಿದೆ. ಆದರೆ ನ್ಯೂ ಒರ್ಲಿಯಾನ್ಸ್‌ನಲ್ಲಿ ನಡೆಯುವ ಜಾತ್ರೆಯ ಮೆರವಣಿಗೆ ಮತ್ತು ಆಚರಣೆಗಳು ಉಳಿದೆಲ್ಲ ಪ್ರದೇಶದ ಆಚರಣೆ–ಗಳಿಗಿಂತ ಹೆಚ್ಚು ಆಕರ್ಷಕವಾಗಿದ್ದು ಎಲ್ಲಕ್ಕೂ ಕಿರೀಟಪ್ರಾಯದಂತಿರುತ್ತದೆ.

## ಮಾರ್ಡಿ ಗ್ರಾಸ್ ಜಾತ್ರೆ

ಮಾರ್ಡಿ ಅಂದರೆ ಫ್ರೆಂಚ್ ಭಾಷೆಯಲ್ಲಿ ಮಂಗಳವಾರ ಎಂದರ್ಥ. ಗ್ರಾಸ್

